
ಮೂಲಭೂತವಾಗಿ ಒಂದು ಕೊರತೆಯಿದೆ. ಇದನ್ನು ಆಸ್ವಾದಿಸಲು, ಹಾಡಲು ಯಾರಾದರೂ ಇದ್ದರೆ ಚೆನ್ನಾಗಿರುತ್ತಿತ್ತು' ಎಂದು. ಒಬ್ಬ ಒಳ್ಳೆಯ ಸೃಜನಶೀಲ ವ್ಯಕ್ತಿಗೆ ಕೇಳುವ ಕಲೆಯೂ ಗೊತ್ತಿರುತ್ತದೆ. ಅವರ ಸೂಚನೆಯನ್ನು ಮನ್ನಿಸಿದ ಸೃಷ್ಟಿಕರ್ತ ಒಂಬತ್ತು ಕಲಾದೇವತೆಗಳನ್ನು ಸೃಷ್ಟಿಸಿದನು. ಆ ದೇವತೆಗಳೆಲ್ಲಾ ಸೃಜನಶೀಲ ಕಲಾವಿದನ ಕಿವಿಯಲ್ಲುಸುರುತ್ತಾರೆ. ತನ್ಮೂಲಕ ಕವಿ ಜೀವ ಸಂಭ್ರಮದ ಉಲಿಗಳನ್ನು ಉಲಿಯುತ್ತಾನೆ. ಸೃಜನಶೀಲ ಕ್ರಿಯೆಯನ್ನು ಕವಿ ತಾನು ಸಂಭ್ರಮಿಸುವುದಲ್ಲದೇ ತಾನೂ ಆ ಪ್ರಕ್ರಿಯೆಯ ಭಾಗವಾಗಿ ತಾನೂ ಮರು ಸೃಷ್ಟಿಯಾಗುತ್ತಾನೆ. ನಾವು ಸೃಷ್ಟಿಸುವುದು ಮಾತ್ರವಲ್ಲ, ಅದೂ ನಮ್ಮನ್ನು ಸೃಷ್ಟಿಸುತ್ತದೆ. ಇದು ಇಮ್ಮುಖ ಬದಲಾವಣೆ.

ಹೌದು, ಜೀವನ ನಮಗೆ ಹಿಂದೆಂದೂ ಕಂಡಿರದ ಕೇಳಿರದ ಸಾಧ್ಯತೆಗಳನ್ನು ಕೊಡುವುದು, ತಾನೂ ಕಂಡುಕೊಳ್ಳಲೆಂದು, ಇದು ಪ್ರತೀ ಜೀವದ ಸಾಧ್ಯತೆ. ನಾವು ಹಾಡಿದ್ದನ್ನು ಕೇಳಲು ಅದಕ್ಕೂ ಉತ್ಸಾಹ. ನಮ್ಮನ್ನೊಂದು ಮಾಧ್ಯಮವಾಗಿಸಿ ಜೀವಿಸುತ್ತಿರುವ ಬದುಕಿಗೆ ಅದರದೇ ಕಲಿಕೆಯಿದೆ. ಒಬ್ಬ ಕವಿಯ ಕರ್ತವ್ಯವೇನೆಂದರೆ ಬದುಕು ಉಲಿದದ್ದನ್ನು ಕೇಳುವುದು. ಆ ಪಿಸುಮಾತಿಗೆ ನಾವು ಮಾತಾಗಬೇಕು, ಅದು ತಾನೇ ವ್ಯಕ್ತವಾಗುವಂತೆ, ಹಾಡಾಗುವಂತೆ, ಭೂಮಿಯ ಮೌನ ಮಿಡಿತಕ್ಕೆ ಅಕ್ಷರವಾಗಬೇಕು. ಆ ಮೌನ ಕಂಪನಕ್ಕೆ ಹಾಗಾಗಬೇಕಾದರೆ ನಾವು ಜೀವನಕ್ಕೆ ಹತ್ತಿರವಾಗಬೇಕು. ಜೀವದೆದೆಗೆ ಕಿವಿಯಿಟ್ಟು ನಮ್ಮ ಕೇಳುವಿಕೆಯನ್ನು ಸೂಕ್ಷ್ಮಗೊಳಿಸಬೇಕು, ಅದರೊಡನೆ ತಾದಾತ್ಮ್ಯದಲ್ಲಿರಬೇಕು. ಅದರ ಮಾತಿಗೆ ಮೋಸವಾಗದಂತೆ ನಮ್ಮ ಮಾತೇ ಮರೆಯದಂತಿರಬೇಕು. ಬರಿಯ ನಮ್ಮ ನೋವು ನಲಿವುಗಳಿಗಲ್ಲದೆ, ಎಲ್ಲರ ಎಲ್ಲದರ ಭಾವನೆಗಳಿಗೆ ಸ್ಪಂದಿಸುವಂತಾಗಬೇಕು.


ಯೊಹೊ ಮೂಹಿಕಾ

ಪೌರಾಣಿಕ ಕಥೆ ಹೇಳಿದಂತೆ ನಾವು ಈ ಭೂಮಿಯ ಬದುಕ ಹಾಡಬೇಕು. ಅಷ್ಟು ಮಾತ್ರವಲ್ಲದೆ, ಎಲ್ಲವನ್ನೂ ಆವರಿಸಿರುವ ಮೌನ ಮಿಡಿತದಂತಿರುವ ದೈವಿಕತೆಯನ್ನೂ ಕಾಣಬೇಕು. ಆ ನಿಗೂಢ ನಿಗೂಢವಾಗಿರುವುದು ಕೊರತೆಯಿಂದಲ್ಲ, ಸಮೃದ್ಧವಾಗಿರುವುದರಿಂದ. ಕಾಣದ್ದು ಅನುಪಸ್ಥಿತಿಯಿಂದಲ್ಲ, ನಮಗೆ ಗ್ರಹಿಸಲು ಆಗದೇ ಇರುವುದರಿಂದ. ಆ ದೈವಿಕತೆಯನ್ನು ಹಿಡಿಯಲಾಗುವುದಿಲ್ಲ. ಆದ್ದರಿಂದ ಅದೇ ನಮ್ಮನ್ನು ಅಪ್ಪಿಕೊಳ್ಳಬೇಕು. ಇದನ್ನು ಉದಾಹರಿಸಲು ಪುರಾಣದ ಒಂದು ಕಥನವನ್ನು ನೋಡೋಣ. ಈ ಕಥೆ ಬರುವುದು ಜುದಾಯಿಸಂನ ಧಾರ್ಮಿಕ ಗ್ರಂಥವಾದ 'ಟಾಲ್ಮಡ್'ನಲ್ಲಿ. ಒಂದೇ ಕ್ಷಣದಲ್ಲಿ, ದೇವರು ಅಗಣಿತ ಸಂಖ್ಯೆಯ ದೇವದೂತರನ್ನು ಸೃಜಿಸಿದನಂತೆ. ಸೃಷ್ಟಿಯ ಪ್ರತೀ ಕ್ಷಣವೂ ಒಬ್ಬೊಬ್ಬ ದೇವದೂತನು ತನ್ನ ಹಾಡನ್ನು ಹಾಡುತ್ತಾನೆ. ಆದ್ದರಿಂದ ಪ್ರತಿ ಕ್ಷಣವೂ ಸೃಷ್ಟಿಕರ್ತನ ಮಹಿಮೆಯ ಭಾಗವಾಗಿರುತ್ತದೆ. ಇನ್ನೊಂದು ಪುರಾಣ ಹೇಳುವಂತೆ, ಒಂದೊಂದು ಕವನವೂ ತನ್ನ ಕಾವ್ಯವನ್ನು ಸಂಭ್ರಮಿಸುವಂತೆ ಎಲ್ಲರೂ ಹಾಡಿದರೂ ಸಂಭ್ರಮಿಸಿದರೂ ಮುಗಿಯದ ಗಣಿ ಅದು. ಎಲ್ಲ ಅರಿತೆನೆಂದರೂ ಅರಿಯಲಾಗದ್ದು. ಪ್ರತಿಯೊಂದು ಕವಿತೆಯೂ ಕೇವಲ ಒಂದು ಕಣ, ಒಂದು ಸೂಚನೆ, ಶೂನ್ಯತೆ ಮತ್ತು ಅದರಿಂದ ಹೊರಬರುವ ಒಂದು ಬೆಳಕಿನ ಕಣದ ಮುಖಾಮುಖಿ. ಒಂದು ಬೆಳಕಿನ ಕಣ ಅದೆಷ್ಟೇ ಚಿಕ್ಕದಾದರೂ ಅದೆಂದೂ ವ್ಯರ್ಥವಲ್ಲ.

ಪ್ರತಿಯೊಬ್ಬನೂ ದೇವದೂತನಾಗಬಹುದು, ಇದರರ್ಥ ಸಂದೇಶವಾಹಕ ಎಂದಷ್ಟೇ. ಪ್ರತಿಯೊಬ್ಬನೂ ಪದಕ್ಕೆ ಒಂದು ಹೊಸ ಬೆಳಕನ್ನು ತರಬಹುದು. ಹುಟ್ಟಿದ ಪ್ರತೀ ಪದದಲ್ಲೂ ಹೊಸತನವಿದೆ. ಹಾಗೆ ಹುಟ್ಟಿದ